International Journal of Multidisciplinary Trends

E-ISSN: 2709-9369
P-ISSN: 2709-9350
www.multisubjectjournal.com
IJMT 2024; 6(1): 27-32
Received: 18-11-2023
Accepted: 25-12-2023

**ಶ್ರೀಮತಿ ಗಾಯತ್ರಿ ಎಸ್**
ಸಂಶೋಧನಾ ವಿದ್ಯಾರ್ಥಿ, ಅಣ್ಣಿಗೇರಿ, ಶ್ರೀನಿವಾಸ ವಿಶ್ವವಿದ್ಯಾಲಯ, ಪಾಂಡೇಶ್ವರ ಮಂಗಳೂರು, ಕರ್ನಾಟಕ, ಭಾರತ

**ಡಾ. ಪುಷ್ಪಾವತಿ ಯು ಕೊಚರೆಕರ**
ಸಹಪ್ರಾಧ್ಯಾಪಕರು, ರಾಜೀವ ಗಾಂಧಿ ಎಮ್. ಈಡಿ, ಕಾಲೇಜ ಧಾರವಾಡ, ಕರ್ನಾಟಕ, ಭಾರತ

**Corresponding Author:**
ಸಂಶೋಧನಾ ವಿದ್ಯಾರ್ಥಿ, ಅಣ್ಣಿಗೇರಿ, ಶ್ರೀನಿವಾಸ ವಿಶ್ವವಿದ್ಯಾಲಯ, ಪಾಂಡೇಶ್ವರ ಮಂಗಳೂರು, ಕರ್ನಾಟಕ, ಭಾರತ

# ಧಾರವಾಡ ಜಿಲ್ಲೆಯ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರು ಎದುರಿಸುತ್ತಿರುವ ಶೈಕ್ಷಣಿಕ ಸಮಸ್ಯೆಗಳ ಒಂದು ಅಧ್ಯಯನ

**ಶ್ರೀಮತಿ ಗಾಯತ್ರಿ ಎಸ್, ಡಾ. ಪುಷ್ಪಾವತಿ ಯು**

**ಅಮೂರ್ತ**
ಸಮಾಜದಲ್ಲಿ ಶಿಕ್ಷಕರಿಗೆ ಪವಿತ್ರವಾದ ಪ್ರಮುಖವಾದ ಸ್ಥಾನವನ್ನು ಕೊಡಲಾಗಿದೆ. ಶಿಕ್ಷಕನು ಸಮಾಜಕ್ಕೂ ಶಾಲೆಗೂ ನೇರ ಸಂಪರ್ಕ ಕಲ್ಪಿಸುವವರು ಎಂದು ಹೇಳಬಹುದು. ತನ್ನ ಕೌಶಲ್ಯಯುತ, ಕ್ರಿಯಾತ್ಮಕ, ಬೋಧನಾ ವಿಧಾನಗಳಿಂದ ಮಕ್ಕಳಿಗೆ ಸಮಾಜದ ವಿವಿಧ ಮುಖಗಳ ಪರಿಚಯ ಮಾಡಿಕೊಟ್ಟು ಶಾಲೆಯಲ್ಲಿ ಪೋಷಕ ಬೋಧಕ ಸಂಘಗಳನ್ನು ರಚಿಸಿ ಶಾಲೆಯ ಹಾಗೂ ಸಮಾಜದ ವಿವಿಧ ಸಮಸ್ಯೆಗಳನ್ನು ಶಾಶ್ವತ ಸಮಾಜದ ರಚನೆಗೆ ಕೈಗೊಳ್ಳುವ ಕರ್ತವ್ಯಗಳು ಕಾಲದ ಮಹತ್ವದ ಬಗ್ಗೆ ತಿಳಿಸುವವರಾಗಿದ್ದಾರೆ. ನಮ್ಮ ಸಮಾಜವು ಪ್ರಾಚೀನ ಕಾಲದಿಂದಲೂ ಶಿಕ್ಷಕನಿಗೆ ಉನ್ನತ ಸ್ಥಾನವನ್ನು ನೀಡಿ ಗೌರವಿಸಿರುವುದು ಸರಿಯಷ್ಟೇ? ಅಂತೆಯೇ? "ಮಾತೃ ದೇವೋಭವ ಪಿತೃ ದೇವೋಭವ ಆಚಾರ್ಯ ದೇವೋಭವ ಎಂದು ಹೇಳುವುದರೊಂದಿಗೆ ಅಷ್ಟೇ ಗೌರವ ಸ್ಥಾನವನ್ನು ನೀಡಿರುವುದು ಸರ್ವ ವಿಧಿತ. ಆದರ್ಶವಾದಿಗಳಂತೆ ರವೀಂದ್ರನಾಥ ಠ್ಯಾಗೋರರು ಕೂಡಾ ಶಿಕ್ಷಕರಿಗೆ ಮಹತ್ವದ ಸ್ಥಾನವನ್ನು ನೀಡಿದ್ದಾರೆ. ಶಿಕ್ಷಕನ ಸ್ಥಾನಮಾನ ಸಮಾಜದಲ್ಲಿ ಅಚ್ಚಳಿಯದೇ ಉಳಿಯಬೇಕಾದರೆ ಮತ್ತು ಸಮಾಜ ಶಾಲೆಯ ಜೊತೆಗೆ ಕೈಜೋಡಿಸಿ ಅಭಿವೃದ್ಧಿಕಾರ್ಯಗಳಲ್ಲಿ ತೊಡಗಬೇಕು. ಸಂಶೋಧನ ಅಧ್ಯಯನಕ್ಕೆ ಮಾಹಿತಿಯನ್ನು ಸಂಗ್ರಹಿಸಲು ಸರಳ ಯಾದೃಚ್ಛಿಕ (ರ್‍ಯಾಂಡಮ್) ಮಾದರಿಯ ವಿಧಾನವನ್ನು ಅನುಸರಿಸಲಾಯಿತು. ಧಾರವಾಡ ಜಿಲ್ಲೆಯ ಐದು ತಾಲೂಕುಗಳಲ್ಲಿಯ ಪ್ರೌಢ ಶಾಲೆಗಳ 300 ಶಿಕ್ಷಕರಿಂದ ಮಾಹಿತಿ ಸಂಗ್ರಹಿಸಲಾಯಿತು. ಅದರಲ್ಲಿ 150 ಗ್ರಾಮೀಣ ಪ್ರದೇಶ ಹಾಗೂ 150 ನಗರ ಪ್ರದೇಶದ ಮಾಹಿತಿದಾರರಿಂದ ಮಾಹಿತಿ ಪಡೆದುಕೊಳ್ಳಲಾಯಿತು.

**ಕೀ ಪದಗಳು :** ಶಿಕ್ಷಕರ ಶೈಕ್ಷಣಿಕ ಸಮಸ್ಯೆಗಳು

## ಪೀಠಿಕೆ

**ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕರ ಪಾತ್ರ.**

ವಿನ ಸ್ಥಾನವನ್ನು ದೇವರ ಸ್ಥಾನಕ್ಕೆ ಸರಿಸಮ ಎಂದು ಹೇಳಲಾಗಿದೆ. ಶಿಕ್ಷಕ ವೃತ್ತಿ ಒಂದು ಪವಿತ್ರ ವೃತ್ತಿ ಆಗಿದೆ. ಶಿಕ್ಷಣ ಕ್ಷೇತ್ರದ ನಾಡಿಯೇ ಶಿಕ್ಷಕ ಆದ್ದರಿಂದ ಶಿಕ್ಷಕನ ಮೇಲೆ ಗುರುತರವಾದ ಜವಾಬ್ದಾರಿ ಇದೆ. ಶಿಕ್ಷಕನು ಸಮಾಜಕ್ಕು ಮತ್ತು ಶಾಲೆಗೂ ನೇರ ಸಂಪರ್ಕ ಕಲ್ಪಿಸುವ ಮಧ್ಯವರ್ತಿ ಎಂದು ಕರೆಯಲಾಗಿದೆ. ತನ್ನ ಕೌಶಲ್ಯಯುತ ಕ್ರಿಯಾತ್ಮಕ ಬೋಧನೆಗಳಿಂದ ಮಕ್ಕಳಿಗೆ ಸಮಾಜದ ವಿವಿಧ ಮುಖಗಳ ಪರಿಚಯ ಮಾಡಿಕೊಟ್ಟು ಶಾಲೆಗಳಲ್ಲಿ ಪೋಷಕ ಬೋಧಕ ಸಂಘಗಳನ್ನು ಸ್ಥಾಪಿಸಿ ಶಾಲೆಯ ಹಾಗೂ ಸಮಾಜದ ವಿವಿಧ ಸಮಸ್ಯೆಗಳನ್ನು ಪರಿಹರಿಸಬೇಕು. ಪ್ರಜಾಪ್ರಭುತ್ವದ ಮಹತ್ವದ ದೃಢ ಹಾಗೂ ಶಾಶ್ವತ ಸಮಾಜದ ರಚನೆಗೆ ಕೈಗೊಳ್ಳುವ ಕರ್ತವ್ಯಗಳು ಕಾಲದ ಮಹತ್ವ ಹಾಗೂ ತಂದೆ ತಾಯಿಯರು, ಸರಕಾರದವರು. ಸಮಾಜವು ಹೂಡಿದ ಬಂಡವಾಳಕ್ಕೆ ಸೂಕ್ತ ಬಳಕೆಗೆ ಒತ್ತಾಯ ಮುಂತಾದ ಅಂಶಗಳನ್ನು ಶಿಕ್ಷಕನು ವಿದ್ಯಾರ್ಥಿಗಳಿಗೆ ತಿಳಿಯಲು ಅನುವು ಮಾಡಿಕೊಡಬೇಕು. ಸಮಾಜದ ಭಾವಿ ಜನಾಂಗದ ರಚನೆಯಲ್ಲಿ ಶಿಕ್ಷಕನು ಮುಖ್ಯ ಪಾತ್ರವಹಿಸಬೇಕು ಜನತೆಯಲ್ಲಿ ಮೌಡ್ಯತೆಯನ್ನು ಮತ್ತು ಮೂಢನಂಬಿಕೆಯನ್ನು ಹೋಗಲಾಡಿಸಬೇಕು ವಿದ್ಯಾರ್ಥಿಗಳಿಗೆ ಪೋಷಕ ಸ್ಥಾನದಲ್ಲಿ ನಿಂತು ಮಾರ್ಗದರ್ಶನ ಮಾಡಬೇಕು.

"ಶಿಕ್ಷಣ ಸೌರ್ಯವ್ಯೂಹದಲ್ಲಿ ಸೂರ್ಯನಿದ್ದಂತೆ ಶಿಕ್ಷಣದ ಕ್ಷೇತ್ರದಲ್ಲಿ ಶಿಕ್ಷಕ ಅಂದರೆ ಪ್ರತಿಯೊಂದು ಜೀವರಾಶಿಗೂ ಚೇತನ ತುಂಬುವ ಸೂರ್ಯ ಎಷ್ಟು ಮಹತ್ವವುಳ್ಳವನೋ ಅಷ್ಟೇ ಶಿಕ್ಷಕ ಮಾನವ ಕುಲಕ್ಕೆ ಚೇತನ ತುಂಬುವ ಸಂಜೀವಿನಿ" ಎಂದು ಹೇಳಬಹುದು.

ಶಿಕ್ಷಕನು ಶಿಕ್ಷಣ ವ್ಯವಸ್ಥೆ ಒಂದು ಉತ್ತಮವಾದಂತಹ ಹಂತವನ್ನು ತಲುಪಬೇಕಾದರೆ, ಇಲ್ಲಿ ಶಿಕ್ಷಕ–ವಿದ್ಯಾರ್ಥಿ ಪಠ್ಯವಸ್ತು ಪ್ರಮುಖ ಪಾತ್ರವಹಿಸುತ್ತದೆ. ಸಮಾಜದಲ್ಲಿ ಶಿಕ್ಷಕರಿಗೆ ಪವಿತ್ರವಾದ ಪ್ರಮುಖವಾದ ಸ್ಥಾನವನ್ನು ಕೊಡಲಾಗಿದೆ. ಶಿಕ್ಷಕನು ಸಮಾಜಕ್ಕೂ ಶಾಲೆಗೂ ನೇರ ಸಂಪರ್ಕ ಕಲ್ಪಿಸುವವರು ಎಂದು ಹೇಳಬಹುದು. ತನ್ನ ಕೌಶಲ್ಯಯುತ, ಕ್ರಿಯಾತ್ಮಕ, ಬೋಧನಾ ವಿಧಾನಗಳಿಂದ ಮಕ್ಕಳಿಗೆ ಸಮಾಜದ ವಿವಿಧ ಮುಖಗಳ ಪರಿಚಯ ಮಾಡಿಕೊಟ್ಟು ಶಾಲೆಯಲ್ಲಿ ಪೋಷಕ ಬೋಧಕ ಸಂಘಗಳನ್ನು ರಚಿಸಿ ಶಾಲೆಯ ಹಾಗೂ ಸಮಾಜದ ವಿವಿಧ ಸಮಸ್ಯೆಗಳನ್ನು ಶಾಶ್ವತ ಸಮಾಜದ ರಚನೆಗೆ ಕೈಗೊಳ್ಳುವ ಕರ್ತವ್ಯಗಳು ಕಾಲದ ಮಹತ್ವದ ಬಗ್ಗೆ ತಿಳಿಸುವವರಾಗಿದ್ದಾರೆ.

ನಮ್ಮ ಸಮಾಜವು ಪ್ರಾಚೀನ ಕಾಲದಿಂದಲೂ ಶಿಕ್ಷಕನಿಗೆ ಉನ್ನತ ಸ್ಥಾನವನ್ನು ನೀಡಿ ಗೌರವಿಸಿರುವುದು ಸರಿಯಷ್ಟೇ? ಅಂತೆಯೇ? "ಮಾತೃ ದೇವೋಭವ ಪಿತೃ ದೇವೋಭವ ಆಚಾರ್ಯ ದೇವೋಭವ ಎಂದು ಹೇಳುವುದರೊಂದಿಗೆ ಅಷ್ಟೇ ಗೌರವ ಸ್ಥಾನವನ್ನು ನೀಡಿರುವುದು ಸರ್ವ ವಿಧಿತ.

ಆದರ್ಶವಾದಿಗಳಂತೆ ರವೀಂದ್ರನಾಥ ಠ್ಯಾಗೋರರು ಕೂಡಾ ಶಿಕ್ಷಕರಿಗೆ ಮಹತ್ವದ ಸ್ಥಾನವನ್ನು ನೀಡಿದ್ದಾರೆ.

ಶಿಕ್ಷಕನ ಸ್ಥಾನಮಾನ ಸಮಾಜದಲ್ಲಿ ಅಚ್ಚಳಿಯದೇ ಉಳಿಯಬೇಕಾದರೆ ಮತ್ತು ಸಮಾಜ ಶಾಲೆಯ ಜೊತೆಗೆ ಕೈಜೋಡಿಸಿ ಅಭಿವೃದ್ಧಿಕಾರ್ಯಗಳಲ್ಲಿ ತೊಡಗಬೇಕು.

### ಅಧ್ಯಯನದ ಅವಶ್ಯಕತೆ ಮತ್ತು ಮಹತ್ವ

ಯಾವುದೇ ಒಂದು ರಾಷ್ಟ್ರದ ಪ್ರಗತಿಯು ಅಲ್ಲಿನ ಶಿಕ್ಷಣ ವ್ಯವಸ್ಥೆಯನ್ನು ಅವಲಂಬಿಸಿರುತ್ತದೆ. ಅದೇ ರೀತಿಯಾಗಿ ಪ್ರಜಾಪ್ರಭುತ್ವ ರಾಷ್ಟ್ರವಾದ ನಮ್ಮ ಭಾರತ ದೇಶ ವಿಶ್ವದಲ್ಲಿಯೇ ಅತೀ ಉನ್ನತವಾದ ಸಂಸ್ಕೃತಿ ಹೊಂದಿದ ರಾಷ್ಟ್ರವಾಗಿದೆ. ದೇಶದ ಪ್ರಗತಿ ಅಭಿವೃದ್ಧಿಗೆ ಸಂಸ್ಕೃತಿಯ ಉಳಿವಿಗಾಗಿ ಶಿಕ್ಷಕರ ಪಾತ್ರ ಅತಿಮಹತ್ವವಾಗಿದೆ. ಇಂತಹ ಕಾರ್ಯ ನಿರ್ವಹಿಸುವ ಶಿಕ್ಷಕರಿಗೆ ಹಲವಾರು ಸಮಸ್ಯೆಗಳು ಇರುತ್ತದೆ. ಸಮಸ್ಯೆಗಳ ಕುರಿತು ಅಧ್ಯಯನ ಮಾಡುವುದು ಬಹಳ ಅವಶ್ಯಕ ಮತ್ತು ಮಹತ್ವದ್ದಾಗಿದೆ. ಶಿಕ್ಷಣ ಕ್ಷೇತ್ರ ಇನ್ನೂ ಪ್ರಗತಿಯನ್ನು ಸಾಧಿಸಬೇಕಾದರೆ ಶಿಕ್ಷಕರ ಸಮಸ್ಯೆಗಳಿಗೆ ಪರಿಹಾರ ಸಿಗಬೇಕು ಶಿಕ್ಷಣದ ಪ್ರಸಾರ ಮಾಡುವ ಶಿಕ್ಷಕ ಕೆಲವು ಸಮಸ್ಯೆಗಳಿಂದ ಮುಕ್ತನಾಗಿ ಮಾನಸಿಕವಾಗಿ ಸ್ವತಂತ್ರನಾಗಬೇಕು ಸಮಸ್ಯೆಗಳು ಯಾವುವೆಂದರೆ, ಭೌತಿಕ ಸಮಸ್ಯೆ, ವೇತನ ಸಮಸ್ಯೆ, ಆಡಳಿತ ಮಂಡಳಿಯವರ ನೀಡುವ ಕಿರುಕುಳ ಇತ್ಯಾದಿ ಆಗಿವೆ. ಆದ್ದರಿಂದ, ಈ ಎಲ್ಲ ಸಮಸ್ಯೆಗಳನ್ನು ಎಲ್ಲಿಯವರಿಗೆ ಸುಧಾರಣೆ ಆಗುವುದಿಲ್ಲವೋ, ಅಲ್ಲಿಯವರೆಗೆ ಶಿಕ್ಷಣ ಸುಧಾರಿಸಲು ಸಾಧ್ಯವಿಲ್ಲ.

ಸಮಸ್ಯೆಗಳಲ್ಲಿ ಸಿಕ್ಕ ಶಿಕ್ಷಕರಿಗೆ ಒಳ್ಳೆಯ ಚಿಂತನೆ ಮಾಡಲು ಮತ್ತು ಜೀವನದ ಅವಶ್ಯಕತೆಯನ್ನು ಕಂಡುಕೊಳ್ಳಲು ಸಾಧ್ಯವಾಗುವದಿಲ್ಲ. ಮಕ್ಕಳ ಭಾವನೆಗಳ ಜೊತೆಗೆ ಸ್ಪಂದಿಸಲು ಶಿಕ್ಷಕರಿಗೆ ಶಾಂತಿ ಸಮಾಧಾನ ಅವಶ್ಯಕ ಇದೆ. ಇವರ ಸಮಸ್ಯೆಗಳನ್ನು ಅಧ್ಯಯನ ಮಾಡುವುದು ಅವಶ್ಯಕ.

### ಅಧ್ಯಯನದ ಉದ್ದೇಶಗಳು

- ಧಾರವಾಡ ಜಿಲ್ಲೆಯ ಗ್ರಾಮೀಣ ಹಾಗೂ ನಗರ ಶಿಕ್ಷಕ, ಶಿಕ್ಷಕಿಯರ ಸಮಸ್ಯೆಗಳ ಸಮೀಕ್ಷೆ ಮಾಡುವುದು.
- ಆಡಳಿತ ಮಂಡಳಿ ಮತ್ತು ಶಿಕ್ಷಕರ ಸಂಬಂಧಗಳ ಸಮಸ್ಯೆ ತಿಳಿಯುವದು.
- ಶಿಕ್ಷಕರ ಶೈಕ್ಷಣಿಕ ಸಮಸ್ಯೆಗಳನ್ನ ಗುರುತಿಸುವುದು.

### ಅಧ್ಯಯನದ ಸಮಸ್ಯೆಯ ಹೇಳಿಕೆ

ಧಾರವಾಡ ಜಿಲ್ಲೆಯ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರು ಎದುರಿಸುತ್ತಿರುವ ಶೈಕ್ಷಣಿಕ ಸಮಸ್ಯೆಗಳ ಒಂದು ಅಧ್ಯಯನ

### ಸಂಶೋಧನಾ ವಿಧಾನ

ಈ ಅಧ್ಯಯನವು ಧಾರವಾಡ ಜಿಲ್ಲೆಯ ಐದು ತಾಲೂಕುಗಳಲ್ಲಿ ಶಿಕ್ಷಕರು ಎದುರಿಸುತ್ತಿರುವ ಸಮಸ್ಯೆಗಳನ್ನು ತಿಳಿಯಲು ಭೇಟಿ ನೀಡಿ ಸಮೀಕ್ಷಾ ವಿಧಾನದಿಂದ ಪ್ರಶ್ನಾವಳಿಗಳ ಮೂಲಕ ಕುಟುಂಬಗಳಿಗೆ ಸಂಬಂಧಿಸಿದಂತೆ ಶಿಕ್ಷಕರು ಎದುರಿಸುತ್ತಿರು ಸಮಸ್ಯೆಗಳ ಮಾಹಿತಿಯನ್ನು ಸಂಗ್ರಹಿಸಲಾಯಿತು.

### ಮಾದರಿ ಆಯ್ಕೆ

ಸಂಶೋಧನ ಅಧ್ಯಯನಕ್ಕೆ ಮಾಹಿತಿಯನ್ನು ಸಂಗ್ರಹಿಸಲು ಸರಳ ಯಾದೃಚ್ಛಿಕ (ರ್‍ಯಾಂಡಮ್) ಮಾದರಿಯ ವಿಧಾನವನ್ನು ಅನುಸರಿಸಲಾಯಿತು. ಧಾರವಾಡ ಜಿಲ್ಲೆಯ ಐದು ತಾಲೂಕುಗಳಲ್ಲಿಯ ಪ್ರೌಢ ಶಾಲೆಗಳ 300 ಶಿಕ್ಷಕರಿಂದ ಮಾಹಿತಿ ಸಂಗ್ರಹಿಸಲಾಯಿತು. ಅದರಲ್ಲಿ 150 ಗ್ರಾಮೀಣ ಪ್ರದೇಶ ಹಾಗೂ 150 ನಗರ ಪ್ರದೇಶದ ಮಾಹಿತಿದಾರರಿಂದ ಮಾಹಿತಿ ಪಡೆದುಕೊಳ್ಳಲಾಯಿತು.

### ಅಧ್ಯಯನದ ಇತಿಮಿತಿಗಳು

- ಈ ಅಧ್ಯಯನವು ಧಾರವಾಡ ಜಿಲ್ಲೆಗೆ ಮಾತ್ರ ಸೀಮಿತವಾಗಿದೆ.
- ಈ ಅಧ್ಯಯನವು ಧಾರವಾಡ ಜಿಲ್ಲೆಯ 500 ಶಿಕ್ಷಕರಿಗೆ ಸೀಮಿತವಾಗಿದೆ.
- ಈ ಅಧ್ಯಯನಕ್ಕೆ ಒಟ್ಟು 300(ಗ್ರಾಮೀಣ 150, ನಗರ 150) ಮಾಹಿತಿದಾರರನ್ನು ಆಯ್ಕೆಮಾಡಿಕೊಳ್ಳಲಾಗಿದೆ.
- ಈ ಅಧ್ಯಯನವು ಗ್ರಾಮೀಣ ಹಾಗೂ ನಗರ ಪ್ರದೇಶಕ್ಕೆ ಸೀಮಿತವಾಗಿದೆ.
- ಈ ಅಧ್ಯಯನ ಅನುದಾನಿತ ಮತ್ತು ಸರಕಾರಿ ಪ್ರೌಢ ಶಾಲೆಗಳಿಗೆ ಮಾತ್ರ ಸೀಮಿತವಾಗಿದೆ.

### ಸಂಖ್ಯಾಶಾಸ್ತ್ರೀಯ ತಂತ್ರಗಳು

ಪ್ರಸುತ್ತ ಅಧ್ಯಯನದಲ್ಲಿ ಧಾರವಾಡ ಜಿಲ್ಲೆಯ ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರು ಎದುರಿಸುತ್ತಿರುವ ಶೈಕ್ಷಣಿಕ ಸಮಸ್ಯೆಗಳ ಕುರಿತು ಒಂದು ಅಧ್ಯಯನ. ಶಿಕ್ಷಕರು ಎದುರಿಸುತ್ತಿರುವ ಶೈಕ್ಷಣಿಕ ಸಮಸ್ಯೆಗಳನ್ನು ಸಂಗ್ರಹಿಸಲು ಸಂಶೋಧಕರು ಮಾರ್ಗದರ್ಶಕರ ಸಲಹೆಯ ಮೇರೆಗೆ ಪರಿಷ್ಕರಣೆ ಮಾಡಿದ ಸ್ವರಚಿತ ಪ್ರಶ್ನಾವಳಿಯನ್ನು ಸಿದ್ಧಪಡಿಸಿ, ಸಮೀಕ್ಷಾ ವಿಧಾನದ ಮೂಲಕ ಧಾರವಾಡ ಶಹರದ ಆಯ್ಕೆ 150 ಗ್ರಾಮೀಣ ಶಿಕ್ಷಕರು ಹಾಗೂ 150 ನಗರ ಪ್ರದೇಶದ ಶಿಕ್ಷಕರಿಗೆ ನೀಡಿ, ಅವರಿಂದ ಬಂದ ಉತ್ತರಗಳನ್ನು ಅಥವಾ

ಅಭಿಪ್ರಾಯಗಳನ್ನು ಪ್ರತಿಪ್ರಶ್ನೆಗಳಿಗೆ ಶೇಕಡಾವಾರು ಹಾಗೂ ಸಹಸಂಬಂಧವನ್ನು ವಿಶ್ಲೇಷಿಸಲಾಗಿದೆ.

**ಸಂಶೋಧನಾ ಅಧ್ಯಯನದ ವಿಶ್ಲೇಷಣೆ**

**ಪ್ರ.೧) ನಿಮ್ಮ ಕಾರ್ಯದಲ್ಲಿ ಆಡಳಿತ ಮಂಡಳಿಯವರು ಹಸ್ತಕ್ಷೇಪ ಮಾಡುತ್ತಾರೆಯೇ?**

**೧. ಗ್ರಾಮೀಣ ಪ್ರದೇಶ ಅ) ಅನುದಾನಿತ ಪ್ರೌಢಶಾಲೆ**

**ಕೋಷ್ಟಕ – ೧**

| ಒಟ್ಟು ಶಿಕ್ಷಕರು | ಶೇಕಡಾವಾರು ಹೌದು | ಶೇಕಡಾವಾರು ಇಲ್ಲ |
|---|---|---|
| ೨೫ | ೪% | ೯೬% |

**ಅರ್ಥೈಸುವಿಕೆ**

ಈ ಮೇಲಿನ ಕೋಷ್ಟಕದಿಂದ ತಿಳಿದು ಬರುವುದೇನೆಂದರೆ, ಗ್ರಾಮೀಣ ಪ್ರದೇಶದ ಅನುದಾನಿತ ಪ್ರೌಢಶಾಲೆಯ ಶಿಕ್ಷಕರಿಂದ ದತ್ತಾಂಶವನ್ನು ಸಂಗ್ರಹಿಸಿದಾಗ ಮೇಲಿನ ಪ್ರಶ್ನೆಗೆ ಸಂಬಂಧಪಟ್ಟಂತೆ ಸರಾಸರಿ ೯೬% ಪ್ರತಿಶತ ಶಿಕ್ಷಕರು ಆಡಳಿತ ಮಂಡಳಿ ಹಸ್ತಕ್ಷೇಪ ಮಾಡುವದಿಲ್ಲ, ಧನಾತ್ಮಕ ಮನೋಭಾವನೆಯನ್ನು ಹೊಂದಿದ್ದಾರೆ. ಹಾಗೂ ೪% ಪ್ರತಿಶತ ಋಣಾತ್ಮಕ ಭಾವನೆಯನ್ನು ಹೊಂದಿದ್ದಾರೆ ಎಂದು ತಿಳಿದು ಬಂದಿದೆ.

ಬ) ಗ್ರಾಮೀಣ ಪ್ರದೇಶದ ಸರಕಾರಿ ಪ್ರೌಢಶಾಲೆ:

**ಕೋಷ್ಟಕ – ೨**

| ಒಟ್ಟು ಶಿಕ್ಷಕರು | ಶೇಕಡಾವಾರು ಹೌದು | ಶೇಕಡಾವಾರು ಇಲ್ಲ |
|---|---|---|
| ೨೫ | ೪% | ೯೬% |

**ಸುವಿಕೆ**

ಈ ಮೇಲಿನ ಕೋಷ್ಟಕದಿಂದ ತಿಳಿದು ಬರುವುದೇನೆಂದರೆ ಗ್ರಾಮೀಣ ಪ್ರದೇಶದ ಸರಕಾರಿ ಪ್ರೌಢಶಾಲೆ ಶಿಕ್ಷಕರಿಂದ ದತ್ತಾಂಶಗಳನ್ನು ಸಂಗ್ರಹಿಸಿದಾಗ ಸರಾಸರಿ ೯೬% ಧನಾತ್ಮಕ ಮನೋಭಾವನೆ ಹೊಂದಿದ್ದಾರೆ ಹಾಗು ಸರಾಸರಿ ೪% ಇಲ್ಲವೆಂದು ಪ್ರತಿಕ್ರಿಯೆ ನೀಡಿದ್ದಾರೆ.

**೧. ನಗರ ಪ್ರದೇಶ ಅ) ಅನುದಾನಿತ ಪ್ರೌಢಶಾಲೆ**

**ಕೋಷ್ಟಕ– ೩**

| ಒಟ್ಟು ಶಿಕ್ಷಕರು | ಶೇಕಡಾವಾರು ಹೌದು | ಶೇಕಡಾವಾರು ಇಲ್ಲ |
|---|---|---|
| ೨೫ | ೪೦% | ೬೦% |

**ಅರ್ಥೈಸುವಿಕೆ**

ಈ ಮೇಲಿನ ಕೋಷ್ಟಕವನ್ನು ಗಮನಿಸಿದಾಗ ನಗರ ಪ್ರದೇಶದ ಅನುದಾನಿತ ಪ್ರೌಢಶಾಲೆಯ ಶಿಕ್ಷಕರಿಂದ ದತ್ತಾಶಗಳನ್ನು ಸಂಗ್ರಹಿಸಿದಾಗ ಪ್ರಶ್ನೆಗೆ ಸಂಬಂಧಪಟ್ಟಂತೆ ಸರಾಸರಿ ೪೦% ಹೌದು ಹಾಗೂ ಸರಾಸರಿ ೬೦% ಇಲ್ಲ ಎಂಬ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

**ಬ) ಸರಕಾರಿ ಪ್ರೌಢಶಾಲೆ**

**ಕೋಷ್ಟಕ– ೪**

| ಒಟ್ಟು ಶಿಕ್ಷಕರು | ಶೇಕಡಾವಾರು ಹೌದು | ಶೇಕಡಾವಾರು ಇಲ್ಲ |
|---|---|---|
| ೨೫ | ೦೦% | ೧೦೦% |

**ಅರ್ಥೈಸುವಿಕೆ**

ಈ ಮೇಲಿನ ಕೋಷ್ಟಕವನ್ನು ಗಮನಿಸಿದಾಗ ನಗರ ಪ್ರದೇಶದ ಸರಕಾರಿ ಪ್ರೌಢಶಾಲೆಯ ಶಿಕ್ಷಕರು ಸರಾಸರಿ ೧೦೦% ಧನಾತ್ಮಕ ಭಾವನೆಯನ್ನು ಆಡಳಿತ ಮಂಡಳಿಯ ಬಗ್ಗೆ ವ್ಯಕ್ತಪಡಿಸಿದ್ದಾರೆ.

**ಪ್ರ. ೧೪ ನಿಮ್ಮ ಶಾಲೆಯ ಪರಿಸರದ ವಿದ್ಯಾಭ್ಯಾಸಕ್ಕೆ ಸೂಕ್ತವಿದೆಯೇ**

**ಗ್ರಾಮೀಣ ಪ್ರದೇಶ. ಅ) ಅನುದಾನಿತ ಪ್ರೌಢಶಾಲೆ.**

**ಕೋಷ್ಟಕ–೧**

| ಒಟ್ಟು ಶಿಕ್ಷಕರು | ಶೇಕಡಾವಾರು ಹೌದು | ಶೇಕಡಾವಾರು ಇಲ್ಲ |
|---|---|---|
| ೨೫ | ೧೦೦% | ೦೦% |

**ಅರ್ಥೈಸುವಿಕೆ**

ಈ ಮೇಲಿನ ಕೋಷ್ಟಕವನ್ನು ಗಮನಿಸಿದಾಗ ನಮಗೆ ತಿಳಿದು ಬರುವದೇನೆಂದರೆ, ಶಾಲೆಯ ಪರಿಸರ ವಿದ್ಯಾಅಭ್ಯಾಸಕ್ಕೆ ಸೂಕ್ತವಾಗಿದೆ ಎಂಬ ಪ್ರಶ್ನೆಗೆ ಗ್ರಾಮೀಣ ಪ್ರದೇಶದ ಪ್ರೌಢಶಾಲೆಯ ಶಿಕ್ಷಕರು ಸರಾಸರಿ ೧೦೦% ರಷ್ಟು ಹೌದು ಎಂದು ಪ್ರತಿಕ್ರಿಯೆಯನ್ನು ನೀಡಿದ್ದಾರೆ.

**ಬ) ಸರಕಾರಿ ಪ್ರೌಢಶಾಲೆ:**

**ಕೋಷ್ಟಕ–೨**

| ಒಟ್ಟು ಶಿಕ್ಷಕರು | ಶೇಕಡಾವಾರು ಹೌದು | ಶೇಕಡಾವಾರು ಇಲ್ಲ |
|---|---|---|
| ೨೫ | ೮೮% | ೧೨% |

**ಅರ್ಥೈಸುವಿಕೆ**

ಈ ಮೇಲಿನ ಕೋಷ್ಟಕವನ್ನು ಗಮನಿಸಿದಾಗ ತಿಳಿದು ಬರುವುದೇನೆಂದರೆ, ಗ್ರಾಮೀಣ ಪ್ರದೇಶದ ಸರಕಾರಿ ಪ್ರೌಢಶಾಲೆಯ ಶಿಕ್ಷಕರು ಶಾಲೆಯ ಪರಿಸರ ಕುರಿತು ವಿದ್ಯಾಭ್ಯಾಸಕ್ಕೆ ಸೂಕ್ತವಾಗಿದೆಯೇ ಎಂಬ ಪ್ರಶ್ನೆಗೆ ಶೇಕಡಾ ೮೮% ರಷ್ಟು ಹೌದು ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ. ಶೇಕಡಾ ೧೨% ಪ್ರತಿಶತ ಶಿಕ್ಷಕರು ಇಲ್ಲ ಎಂದು ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ್ದಾರೆ.

**೨ ನಗರ ಪ್ರದೇಶ: ಅ) ಅನುದಾನಿತ ಪ್ರೌಢಶಲೆ**

**ಕೋಷ್ಟಕ–೩**

| ಒಟ್ಟು ಶಿಕ್ಷಕರು | ಶೇಕಡಾವಾರು ಹೌದು | ಶೇಕಡಾವಾರು ಇಲ್ಲ |
|---|---|---|
| ೨೫ | ೯೬% | ೦೪% |

**ಅರ್ಥೈಸುವಿಕೆ**

ಈ ಮೇಲಿನ ಕೋಷ್ಟಕವನ್ನು ಗಮನಿಸಿದಾಗ ನಮಗೆ ತಿಳಿದು ಬರುವುದೇಂದರೆ, ನಗರ ಪ್ರದೇಶದ ಅನುದಾನಿತ ಪ್ರೌಢಶಾಲೆಯ ಶಿಕ್ಷಕರು ಶಾಲೆಯ ಪರಿಸರ ವಿದ್ಯಾಬ್ಯಾಸಕ್ಕೂ ಸೂಕ್ತವಾಗಿದೆಯೇ

ಎಂಬ ಪ್ರಶ್ನೆಗೆ ಶೇಕಡಾ ೯೬% ರಷ್ಟು ಹೌದು ಎಂದು ಪ್ರತಿಕಿಯೆಯನ್ನು ವ್ಯಕ್ತಪಡಿಸಿದ್ದಾರೆ.

ಬ) ಸರಕಾರಿ ಪ್ರೌಢಶಾಲೆ: **ಕೋಷ್ಟಕ–೪**

| ಒಟ್ಟು ಶಿಕ್ಷಕರು | ಶೇಕಡಾವಾರು ಹೌದು | ಶೇಕಡಾವಾರು ಇಲ್ಲ |
|---|---|---|
| ೨೫ | ೭೬% | ೨೪% |

**ಅರ್ಥೈಸುವಿಕೆ**

ಈ ಮೇಲಿನ ಕೋಷ್ಟಕವನ್ನು ಗಮನಿಸಿದಾಗ, ತಿಳಿದು ಬರುವುದೇನೆಂದರೆ ನಗರ ಪ್ರದೇಶದ ಸರಕಾರಿ ಪ್ರೌಢಶಾಲೆಯ ಶಿಕ್ಷಕರಿಗೆ ನೀಡಿದ ಅಂಶಕ್ಕೆ ಶೇಕಡಾ ೭೬% ರಷ್ಟು ಶಿಕ್ಷಕರು ಹೌದು ಎಂದು ಪ್ರತಿಕ್ರಿಯೆ ತೋರಿಸಿದ್ದಾರೆ. ಹಾಗೂ ಶೇಕಡಾ ೧೨೪% ರಷ್ಟು ಇಲ್ಲ ಪ್ರತಿಕ್ರಿಯೆ ನೀಡಿದ್ದಾರೆ.

**ಪ್ರ. ೨ ನಿಮ್ಮ ಶಾಲೆಯಲ್ಲಿ ಪಾಠೋಪಕರಣ ಮತ್ತು ಪೀಠೋಪಕರಣಗಳ ಸೌಲಭ್ಯವಿದೆಯೇ?**

**ಗ್ರಾಮೀಣ ಪ್ರದೇಶ. ಅ) ಅನುದಾನಿತ ಪ್ರೌಢಶಾಲೆ.**

| ಒಟ್ಟು ಶಿಕ್ಷಕರು | ಶೇಕಡಾವಾರು ಹೌದು | ಶೇಕಡಾವಾರು ಇಲ್ಲ |
|---|---|---|
| ೨೫ | ೧೦೦% | ೦೦% |

**ಅರ್ಥೈಸುವಿಕೆ**

ಈ ಮೇಲಿನ ಕೋಷ್ಟಕವನ್ನು ಗಮನಿಸಿದಾಗ ನಮಗೆ ತಿಳಿದು ಬರುವದೇನೆಂದರೆ ಅನುದಾನಿತ ಪ್ರೌಢಶಾಲೆಯ ಶಿಕ್ಷಕರು ಪಾಠೋಪಕರಣ ಮತ್ತು ಪೀಠೋಪಕರಣಗಳ ಸೌಲಭ್ಯವಿದೆಯೆ ಎಂಬ ಪ್ರಶ್ನೆಗೆ ಶೇಕಡಾ ೧೦೦% ರಷ್ಟು ಹೌದು ಎಂಬ ಪ್ರತಿಕ್ರಿಯಯನ್ನು ನೀಡಿದ್ದಾರೆ.

**ಬ) ಸರಕಾರಿ ಪ್ರೌಢಶಾಲೆ:**

| ಒಟ್ಟು ಶಿಕ್ಷಕರು | ಶೇಕಡಾವಾರು ಹೌದು | ಶೇಕಡಾವಾರು ಇಲ್ಲ |
|---|---|---|
| ೨೫ | ೧೦೦% | ೦೦% |

**ಅರ್ಥೈಸುವಿಕೆ**

ಈ ಮೇಲಿನ ಕೋಷ್ಟಕವನ್ನು ಗಮನಿಸಿದಾಗ ನಮಗೆ ತಿಳಿದು ಬರುವದೇನೆಂದರೆ, ಅನುದಾನಿತ ಪ್ರೌಢಶಾಲೆಯ ಶಿಕ್ಷಕರು ಪಾಠೋಪಕರಣ ಮತ್ತು ಪೀಠೋಪಕರಣಗಳ ಸೌಲಭ್ಯವಿದೆಯೆ? ಎಂಬ ಪ್ರಶ್ನೆಗೆ ಶೇಕಡಾ ೧೦೦% ರಷ್ಟು ಹೌದು ಎಂಬ ಪ್ರತಿಕ್ರಿಯೆಯನ್ನು ನೀಡಿದ್ದಾರೆ.

**II ನಗರ ಪ್ರದೇಶ: ಅ) ಅನುದಾನಿತ ಪ್ರೌಢಶಲೆ**

| ಒಟ್ಟು ಶಿಕ್ಷಕರು | ಶೇಕಡಾವಾರು ಹೌದು | ಶೇಕಡಾವಾರು ಇಲ್ಲ |
|---|---|---|
| ೨೫ | ೧೦೦% | ೦೦% |

ಈ ಮೇಲಿನ ಕೋಷ್ಟಕವನ್ನು ಗಮನಿಸಿದಾಗ ನಮಗೆ ತಿಳಿದು ಬರುವುದೇನೆಂದರೆ, ನಗರ ಪ್ರದೇಶದ ಸರಕಾರಿ ಪ್ರೌಢಶಾಲೆಯ ಶಿಕ್ಷಕರು ಪ್ರತಿಯೊಂದು ತರಗತಿಗೆ ಪ್ರತ್ಯೇಕವಾದ ಕೊಠಡಿ ಇದೆಯೇ ಎಂಬ ಪ್ರಶ್ನೆಗೆ ಶೇಕಡಾ ೧೦೦% ರಷ್ಟು ಹೌದು ಎಂದು ಪ್ರತಿಕ್ರಿಯೆ ನೀಡಿದ್ದಾರೆ.

**ಸರಕಾರಿ ಪ್ರೌಢಶಾಲೆ**

| ಒಟ್ಟು ಶಿಕ್ಷಕರು | ಹೌದು ಶೇಕಡಾವಾರು | ಇಲ್ಲ ಶೇಕಡಾವಾರು |
|---|---|---|
| ೨೫ | ೨೧ ೮೪% | ೦೪ ೧೬% |

**ಅರ್ಥೈಸುವಿಕೆ**

ಈ ಮೇಲಿನ ಕೋಷ್ಟಕವನ್ನು ಗಮನಿಸಿದಾಗ ನಮಗೆ ತಿಳಿದು ಬರುವದೇನೆಂದರೆ, ಅನುದಾನಿತ ಪ್ರೌಢಶಾಲೆಯ ಶಿಕ್ಷಕರು ಪಾಠೋಪಕರಣ ಮತ್ತು ಪೀಠೋಪಕರಣಗಳ ಸೌಲಭ್ಯವಿದೆಯೆ? ಎಂಬ ಪ್ರಶ್ನೆಗೆ ಶೇಕಡಾ ೮೪% ರಷ್ಟು ಹೌದು ಎಂಬ ಪ್ರತಿಕ್ರಿಯೆಯನ್ನು ನಿಡಿದರೆ ಶೇಕಡಾ ೧೬% ಇಲ್ಲ ಎಂದು ಪ್ರತಿಕ್ರೀಯೆ ನೀಡಿದ್ದಾರೆ.

**ಪ್ರ. ೧೭. ನಿಮ್ಮ ಶಾಲೆಯಲ್ಲಿ ಆಟದ ಮೈದಾನವಿದೆಯೇ?**

**ಗ್ರಾಮೀಣ ಪ್ರದೇಶ. ಅ) ಅನುದಾನಿತ ಪ್ರೌಢಶಾಲೆ.**

| ಒಟ್ಟು ಶಿಕ್ಷಕರು | ಶೇಕಡಾವಾರು ಹೌದು | ಶೇಕಡಾವಾರು ಇಲ್ಲ |
|---|---|---|
| ೨೫ | ೧೦೦% | ೦೦% |

**ಅರ್ಥೈಸುವಿಕೆ**

ಈ ಮೇಲಿನ ಕೋಷ್ಟಕವನ್ನು ಗಮನಿಸಿದಾಗ ನಮಗೆ ಕಂಡು ಬರುವದೇನೆಂದರೆ, ಗ್ರಾಮೀಣ ಪ್ರದೇಶದ ಅನುದಾನಿತ ಪ್ರೌಢಶಾಲೆಯ ಶಿಕ್ಷಕರಿಂದ ದತ್ತಾಂಶ ಸಂಗ್ರಹ ಶೇಕಡಾ ೧೦೦% ಹೌದು ಎಂದು ಪ್ರತಿಕ್ರಿಯೆ ನೀಡಿದ್ದಾರೆ.

**ಬ) ಸರಕಾರಿ ಪ್ರೌಢಶಾಲೆ**

| ಒಟ್ಟು ಶಿಕ್ಷಕರು | ಶೇಕಡಾವಾರು ಹೌದು | ಶೇಕಡಾವಾರು ಇಲ್ಲ |
|---|---|---|
| ೨೫ | ೬೦% | ೪೦% |

**ಅರ್ಥೈಸುವಿಕೆ**

ಈ ಮೇಲಿನ ಕೋಷ್ಟಕವನ್ನು ಗಮನಿಸಿದಾಗ ನಮಗೆ ತಿಳಿದು ಬರುವದೇನೆಂದರೆ ಸರಕಾರಿ ಪ್ರೌಢಶಾಲೆಯ ಶಿಕ್ಷಕರು ನಿಮ್ಮ ಶಾಲೆಯಲ್ಲಿ ಆಟದ ಮೈದಾನದವಿದೆಯೇ ಎಂಬ ಪ್ರಶ್ನೆಗೆ ಶೇಕಡಾ ೪೦% ಇಲ್ಲ ಎಂದು ಹಾಗೂ ಶೇಕಡಾ ೬೦% ರಷ್ಟು ಇದೇ ಎಂದು ಪ್ರತಿಕ್ರಿಯೆಯನ್ನು ನೀಡಿದ್ದಾರೆ.

**II ನಗರ ಪ್ರದೇಶ: ಅ) ಅನುದಾನಿತ ಪ್ರೌಢಶಲೆ**

| ಒಟ್ಟು ಶಿಕ್ಷಕರು | ಶೇಕಡಾವಾರು ಹೌದು | ಶೇಕಡಾವಾರು ಇಲ್ಲ |
|---|---|---|
| ೨೫ | ೧೦೦% | ೦೦% |

ಈ ಮೇಲಿನ ಕೋಷ್ಟಕವನ್ನು ಗಮನಿಸಿದಾಗ ನಮಗೆ ತಿಳಿದು ಬರುವುದೇನೆಂದರೆ ನಗರ ಪ್ರದೇಶದ ಅನುದಾನಿತ ಪ್ರೌಢಶಾಲೆಯ ಶಿಕ್ಷಕರು ನಿಮ್ಮ ಶಾಲೆಯಲ್ಲಿ ಆಟದ ಮೈದಾನವಿದೆಯೇ ಎಂಬ ವಿಷಯಕ್ಕೆ ಶೇಕಡಾ ೧೦೦% ಹೌದು ಪ್ರತಿಕ್ರಿಯೆಯನ್ನು ನೀಡಿದ್ದಾರೆ.ಎಂದು ತಿಳಿದು ಬರುತ್ತದೆ.

**ಬ) ಸರಕಾರಿ ಪ್ರೌಢಶಾಲೆ:**

| ಒಟ್ಟು ಶಿಕ್ಷಕರು | ಶೇಕಡಾವಾರು ಹೌದು | ಶೇಕಡಾವಾರು ಇಲ್ಲ |
|---|---|---|
| ೨೫ | ೮೪% | ೧೬% |

**ಅರ್ಥೈಸುವಿಕೆ**

ಈ ಮೇಲಿನ ಕೋಷ್ಠಕವನ್ನು ಗಮನಿಸಿದಾಗ ನಮಗೆ ಅರ್ಥವಾಗುವದೇನೆಂದರೆ ನಗರ ಪ್ರದೇಶದ ಸರಕಾರಿ ಪ್ರೌಢಶಲೆಯ ಶಿಕ್ಷಕರು ನಿಮ್ಮ ಶಾಲೆಯಲ್ಲಿ ಆಟದ ಮೈದಾನವಿದೆಯೇ ಎಂಬ ಪ್ರಶ್ನೆಗೆ ಶೇಕಡಾ ೮೪% ರಷ್ಟು ಹೌದು ಹಾಗೂ ಶೇಕಡಾ ೧೬% ಇಲ್ಲ ಎಂಬ ಪ್ರತಿಕ್ರಿಯೆ ಕಂಡುಬಂದಿದೆ.

**ಪ್ರ. ೧೮. ಸುಗ್ಗಿಯ ಸಮಯದಲ್ಲಿ ಮಕ್ಕಳ ಹಾಜರಾತಿ ಕಡಿಮೆ ಇರುತ್ತದೆಯೇ**

**ಗ್ರಾಮೀಣ ಪ್ರದೇಶ. ಅ) ಅನುದಾನಿತ ಪ್ರೌಢಶಾಲೆ.**

| ಒಟ್ಟು ಶಿಕ್ಷಕರು | ಶೇಕಡಾವಾರು ಹೌದು | ಶೇಕಡಾವಾರು ಇಲ್ಲ |
|---|---|---|
| ೨೫ | ೪೦% | ೬೦% |

**ಅರ್ಥೈಸುವಿಕೆ**

ಈ ಮೇಲಿನ ಕೊಷ್ಟಕದಿಂದ ನಮಗೆ ಅರ್ಥವಾಗುವುದು ಏನೆಂದರೆ ಗ್ರಾಮೀಣ ಅನುದಾನಿತ ಪ್ರೌಢಶಾಲೆಯ ಶಿಕ್ಷಕರಿಗೆ ಸುಗ್ಗಿಯ ಸಮಯದಲ್ಲಿ ಮಕ್ಕಳ ಹಾಜರಾತಿ ಕಡಿಮೆ ಇರುತ್ತದೆಯೇ ಎಂಬ ಪ್ರಶ್ನೆ ನೀಡಿದಾಗ ಅವರಿಂದ ಸಂಗ್ರಹಿಸಿದ ಮಾಹಿತಿ ಶೇಕಡಾ ೪೦% ಹೌದು ಎಂದು ಹಾಗೂ ಶೇಕಡಾ ೬೦% ರಷ್ಟು ಇಲ್ಲ ಎಂಬ ಪ್ರತಿಕ್ರಿಯೆ ನೀಡಿದ್ದಾರೆ. ಎಂದು ಕಂಡು ಬರುತ್ತದೆ.

**ಬ) ಸರಕಾರಿ ಪ್ರೌಢಶಾಲೆ: ಸರಕಾರಿ ಪ್ರೌಢಶಾಲೆ:**

**ಕೋಷ್ಟಕ–೨**

| ಒಟ್ಟು ಶಿಕ್ಷಕರು | ಶೇಕಡಾವಾರು ಹೌದು | ಶೇಕಡಾವಾರು ಇಲ್ಲ |
|---|---|---|
| ೨೫ | ೪೦% | ೬೦% |

ಈ ಮೇಲಿನ ಕೋಷ್ಠಕವನ್ನು ಗಮನಿಸಿದಾಗ ನಮಗೆ ಅರ್ಥವಾಗುವದೇನೆಂದರೆ ನಗರ ಪ್ರದೇಶದ ಸರಕಾರಿ ಪ್ರೌಢಶಲೆಯಲ್ಲಿ ಶಿಕ್ಷಕರು ಸುಗ್ಗಿ ಸಮಯದಲ್ಲಿ ಮಕ್ಕಳ ಹಾಜರಾತಿ ಕಡಿಮೆ ಇರುತ್ತದೆಯೇ ಎಂಬ ಪ್ರಶ್ನೆಗೆ ಶೇಕಡಾ ೪೦% ಹಾಜರಾತಿ ಕಡಿಮೆ ಇರುತ್ತದೆ. ಎಂದು ಹಾಗೂ ಶೇಕಡಾ ೬೦% ಹಾಜರಾತಿ ಹೆಚ್ಚು ಇರುತ್ತದೆ. ಎಂದು ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ್ದಾರೆ.

**II ನಗರ ಪ್ರದೇಶ: ಅ) ಅನುದಾನಿತ ಪ್ರೌಢಶಲೆ**

| ಒಟ್ಟು ಶಿಕ್ಷಕರು | ಶೇಕಡಾವಾರು ಹೌದು | ಶೇಕಡಾವಾರು ಇಲ್ಲ |
|---|---|---|
| ೨೫ | ೨೪% | ೭೬% |

**ಅರ್ಥೈಸುವಿಕೆ**

ಈ ಮೇಲಿನ ಕೋಷ್ಠಕವನ್ನು ಗಮನಿಸಿದಾಗ ನಮಗೆ ತಿಳಿದು ಬರುವುದೇನೆಂದರೆ ನಗರ ಪ್ರದೇಶದ ಅನುದಾನಿತ ಪ್ರೌಢಶಾಲೆಯ ಶಿಕ್ಷಕರು ಪ್ರಶ್ನೆಗೆ ಸಂಬಂಧಪಟ್ಟಂತೆ ಶೇಕಡಾ ೨೪% ಹೌದು ಹಾಗೂ ಶೇಕಡಾ ೭೬% ರಷ್ಟು ಇಲ್ಲ ಎಂಬ ಧನಾತ್ಮಕ ಪ್ರತಿಕ್ರಿಯೆಯನ್ನು ನಿಡಿದ್ದಾನೆ.

**ಬ) ಸರಕಾರಿ ಪ್ರೌಢಶಾಲೆ:**

**ಸರಕಾರಿ ಪ್ರೌಢಶಾಲೆ**

**ಕೋಷ್ಠಕ–೪**

| ಒಟ್ಟು ಶಿಕ್ಷಕರು | ಶೇಕಡಾವಾರು ಹೌದು | ಶೇಕಡಾವಾರು ಇಲ್ಲ |
|---|---|---|
| ೨೫ | ೫೨% | ೪೮% |

**ಅರ್ಥೈಸುವಿಕೆ**

ಈ ಮೇಲಿನ ಕೋಷ್ಠಕವನ್ನು ಗಮನಿಸಿದಾಗ ನಮಗೆ ತಿಳಿದು ಬರುವುದೇನೆಂದರೆ ನಗರ ಪ್ರದೇಶದ ಸರಕಾರಿ ಪ್ರೌಢಶಾಲೆಯ ಶಿಕ್ಷಕರು ಪ್ರಶ್ನೆಗೆ ಸಂಬಂಧಪಟ್ಟಂತೆ ಶೇಕಡಾ ೫೨% ಹೌದು ಹಾಗೂ ಶೇಕಡಾ ೪೮% ರಷ್ಟು ಇಲ್ಲ ಎಂಬ ಧನಾತ್ಮಕ ಪ್ರತಿಕ್ರಿಯೆಯನ್ನು ನೀಡಿದ್ದಾರೆ.

**ತೀರ್ಮಾನಗಳು**

ಆಡಳಿತ ಮಂಡಳಿ ಮತ್ತು ಶಿಕ್ಷಕ ಸಂಬಂದಗಳ ವೈಯಕ್ತಿಕ ವಿಷಯದ ಕುರಿತು ಯಾವುದೇ ರೀತಿ ಸಮಸ್ಯೆ ಇಲ್ಲವೆಂದು ತೀರ್ಮಾನಿಸಲಾಗಿದೆ. ಇದರ ಜೊತೆ ಮಾಧ್ಯಮಿಕ ಶಿಕ್ಷಣದ ಆಡಳಿತ ಮಂಡಳಿಗಳು ಶಿಕ್ಷಕರ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಅವರ ಬೇಡಿಕೆಗಳನ್ನು ಈಡೇರಿಸುವಲ್ಲಿ ಯಶಸ್ವಿಯಾಗಿ ಶಿಕ್ಷಣದ ರೂಪರೇಷಗಳ ಬಗ್ಗೆ ನೀತಿಗಳ ತೀರ್ಮಾನ ತೆಗೆದು ಕೊಳ್ಳಲಾಗಿದೆ. ಶಿಕ್ಷಕರ ಶೈಕ್ಷಣಿಕ ಸಮಸ್ಯೆಗಳನ್ನು ಈಡೇರಿಸುವಲ್ಲಿ ಭೌತಿಕ ಅನುದಾನಿತ ಮತ್ತು ಸರಕಾರಿ ಪ್ರೌಢಶಾಲೆಡಗಳ ಶಿಕ್ಷಕರಿಗೆ ಬೇಕಾದಂತಹ ಮೂಲ ಸೌಲಭ್ಯಗಳ ಜೊತೆಗೆ ಶಾಲೆಯಲ್ಲಿ ಕಂಡು ಬರುವಂತ ಶಿಕ್ಷಣಕ್ಕೆ ಉಪಯುಕ್ತವಿರುವ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಪ್ರೌಢಶಾಲೆಗಳ ನಿರಂತರವಾಗಿ ಶ್ರಮಿಸುತ್ತಿರುವ ಈ ಒಂದು ಕೈಗೊಂಡ ಅಧ್ಯಯನದಿಂದ ತೀರ್ಮಾನಿಸಲಾಗಿದೆ.

ಗ್ರಾಮೀಣ ಹಾಗೂ ನಗರ ಪ್ರದೇಶದ ಪ್ರೌಢಶಾಲೆಯ ಶಿಕ್ಷಕರಿಗೆ ಪ್ರಸ್ತುತ ಶಿಕ್ಷಣ ಇಲಾಖೆ ನೀಡುತ್ತಿರುವ ವೇತನದ ಬಗ್ಗೆ ತೃಪ್ತಿ ಹೊಂದಿದ್ದಾರೆ ಎಂದು ತೀರ್ಮಾನಿಸಲಾಗಿದೆ.

**ಉಪಸಂಹಾರ**

ಒಂದು ದೇಶದ ಪ್ರಗತಿಯು ಅಲ್ಲಿನ ಶಿಕ್ಷಣ ವ್ಯವಸ್ಥೆಯ ಮೇಲೆ ನಿಂತಿರುತ್ತದೆ. ಶಿಕ್ಷಣವು ಒಂದು ಅಭಿವೃದ್ದಿಯ ಅಸ್ತ್ರವಾಗಿದೆ. ಇದನ್ನು ವ್ಯವಸ್ಥಿತವಾಗಿ ನಿರ್ವಹಣೆ ಮಾಡುವವರು ಶಿಕ್ಷಕರು, ಶಿಕ್ಷಕರು ದೇಶದ ಭಾವಿ ಪ್ರಜೆಗಳನ್ನು ನಿರ್ಮಾಣ ಮಾಡುವ ಶಿಲ್ಪಿ ಆಗಿದ್ದಾರೆ, ಆದರೆ ಶಿಕ್ಷಕ ತನ್ನದೇ ಆದ ಸಮಸ್ಯೆಗಳನ್ನು ಎದುರಿಸುತ್ತಿದ್ದಾನೆ. ಶಿಕ್ಷಣದ ವ್ಯವಸ್ಥೆಯು ಯಶಸ್ವಿಯಾಗಿ ಸಾಗಬೇಕಾದರೆ ಶಿಕ್ಷಕರ ಸಮಸ್ಯೆಗಳು ಪರಿಹಾರವಾಗಬೇಕು.

**ಆಧಾರ ಗ್ರಂಥಗಳು**


೧. ಡಾ॥ ಆರ್. ಟಿ. ಜಂತಲಿ(1991)– "ಶಿಕ್ಷಣ ತತ್ವಶಾಸ್ತ್ರ ಮತ್ತು ಸಮಾಜಶಾಸ್ತ್ರ"

೨. ಭಾರತಿ ಪ್ರಕಾಶನ, ಧಾರವಾಡ.

3. ಓಬಳೇಶ ಘಟ್ಟಿ(1999)– "ಉದಯೋನ್ಮುಖ ಭಾರತದಲ್ಲಿ ಶಿಕ್ಷಣ"

4. ಕೆಂಬ್ರಿಜ್ ಪಬ್ಲಿಷಿಂಗ್ ಕಂಪನಿ.

5. ಪಿ. ನಾಗರಾಜ(2000)– "ಶೈಕ್ಷಣಿಕ ಸಂಶೋಧನೆ" ವಿದ್ಯಾನಿದಿ ಪ್ರಕಾಶನ, ಗದಗ.
6. ಡಾ|| ಎಚ್. ವ್ಹಿ. ವಾಮದೇವಪ್ಪ(2000)– "ಶೈಕ್ಷಣಿಕ ಮನೋವಿಜ್ಞಾನ" ವಿದ್ಯಾನಿದಿ ಪ್ರಕಾಶನ, ಗದಗ.
7. ಡಾ|| ಐ. ಎ. ಲೋಕಾಪುರ(2000–01) – "ಪ್ರೌಢ ಶಿಕ್ಷಣ ಹಾಗೂ ಶಿಕ್ಷಕನ
8. ಕಾರ್ಯಗಳು" ವಿದ್ಯಾನಿಧಿ ಪ್ರಕಾಶನ, ಗದಗ
9. ವಿಕ್ರಮ್ ಪ್ರಬಂಧ ಪುಸ್ತಕ (2001-2002) – "ಪ್ರೌಢ ಪ್ರಬಂಧ" ಮೈಸೂರು
10. ವಿಶ್ವವಿದ್ಯಾಲಯ
11. ವ್ಹಿ. ಪಿ ಬಳೆಗಾರ. (2002)–"ಶಿಕ್ಷಣ ವಾರ್ತೆ" ಬೆಂಗಳೂರು.
12. ಎಮ್. ಎಚ್. ಬಿಲಕರ. (2006–07)– "ಶೈಕ್ಷಣಿಕ ಸಂಶೋಧನಾ ಪದ್ಧತಿ"
13. ವಿದ್ಯಾನಿದಿ ಪ್ರಕಾಶನ, ಗದಗ.
14. ಡಾ|| ಎಚ್. ಎಮ್. ಕಾಶಿನಾಥ. (2007) – "ಬೋಧನಾ ಕಲಿಕೆ
15. ಪ್ರಕ್ರೀಯೆಯಲ್ಲ ಮನೋವಿಜ್ಞಾನ" ವಿದ್ಯಾನಿದಿ ಪ್ರಕಾಶನ, ಗದಗ.
16. ಎಸ್. ಕೆ. ಹೊಳೆಯಣ್ಣವರ. (2009–10)– "ಶೈಕ್ಷಣಿಕ ಸಂಶೋಧನಾ ಪದ್ಧತಿ ಹಾಗೂ ಸಂಖ್ಯಾಶಾಸ್ತ್ರ". ವಿದ್ಯಾನಿದಿ ಪ್ರಕಾಶನ. ಗದಗ.